# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002.

ಸಂಖ್ಯೆ: ಮು.ಆ/ಪಿ.ಆರ್/ (ಜ)2965 /2024–25 ದಿನಾಂಕ: 9-1-25

## ಸುತ್ತೋಲೆ

ವಿಷಯ: ಪಾಲಿಕೆಯಿಂದ ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ಕಟ್ಟಡ ನಿರ್ಮಾಣಗಳ ತಡೆಗೆ ಅನುಸರಿಸಬೇಕಾದ ಕಾರ್ಯವಿಧಾನ ಹಾಗೂ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ ಕುರಿತು ಮಾರ್ಗಸೂಚಿಗಳು.

ಉಲ್ಲೇಖ:
1) ಅನಧಿಕೃತ ಕಟ್ಟಡ ನಿರ್ಮಾಣಗಳ ತಡೆಗೆ ಮಾರ್ಗಸೂಚಿಗಳ ಈ ಕಛೇರಿ ಆದೇಶ ಸಂಖ್ಯೆ: ಮುಆ/ಪಿಆರ್(ಜ)/2072/24–25ದಿನಾಂಕ: 18.10.2024
2) ಅನಧಿಕೃತ ನಿರ್ಮಾಣಗಳನ್ನು ತಡೆಯಲು ಈ ಕಛೇರಿಯಿಂದ ಹೊರಡಿಸಲಾದ ಆದೇಶಗಳ ಮಾದರಿಯನ್ನು ನೀಡಲಾದ ಸುತ್ತೋಲೆ ಆದೇಶ ಸಂಖ್ಯೆ: ಮುಆ/ಪಿಆರ್(ಜ)/2254/24–25 ದಿನಾಂಕ: 05.11.2024
3) ಘನ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:295/2022 C/W ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ:162/2022, ರಿಟ್ ಅರ್ಜಿ (ಸಿವಿಲ್) ಸಂಖ್ಯೆ:328/2022 ಪ್ರಕರಣಗಳಲ್ಲಿ ದಿನಾಂಕ: 13.11.2024 ರಂದು ಘನ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶ
4) ಈ ಕಛೇರಿ ಆದೇಶ ಸಂಖ್ಯೆ: ಮುಆ/ಪಿಆರ್(ಜ)/2596/24–25 ದಿನಾಂಕ:06.12.2024
5) ಘನ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:14604/2024 SLP (C) ಸಂಖ್ಯೆ:36440/2024 ರಲ್ಲಿ ನೀಡಿರುವ ಆದೇಶ ದಿನಾಂಕ: 17.12.2024
6) ದಿನಾಂಕ: 02/01/2025 ರಂದು ಪಾಲಿಕೆಯ ಇಲಾಖಾ ಮುಖ್ಯಸ್ಥರೊಂದಿಗೆ ನಡೆಸಿದ ವಿಡೀಯೊ ಕಾನ್ಫರೆನ್ಸ್ ನಲ್ಲಿ ನೀಡಿದ ನಿರ್ದೇಶನ

* * * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಕ್ಷೆ ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಸಮರ್ಪಕವಾಗಿ ತಡೆಯಲು ಬಿಬಿಎಂಪಿ ಕಾಯ್ದೆ–2020ರ ಕಲಂ 248 ಮತ್ತು 356 ರಡಿಯಲ್ಲಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 15(4) ರಡಿಯಲ್ಲಿ ಕ್ರಮ ಜರುಗಿಸಲು ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ಸ್ಪಷ್ಟವಾದ, ಮಾರ್ಗಸೂಚಿ ಹಾಗೂ ಕಾರ್ಯವಿಧಾನಗಳನ್ನು ನೀಡಲಾಗಿದೆ, ಮುಂದುವರೆದು, ಮಂಜೂರಾದ ನಕ್ಷೆ ಉಲ್ಲಂಘನೆ ಮಾಡಿ /ಅನಧಿಕೃತವಾಗಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳನ್ನು ಗುರುತಿಸಿ ಅವುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹೊರಡಿಸಬೇಕಾದ ಆದೇಶಗಳ ಮಾದರಿ ನಮೂನೆ ಮತ್ತು ಕ್ರಮದ ಬಗ್ಗೆ ವಿಸ್ತೃತ ಮಾರ್ಗಸೂಚಿಗಳನ್ನು ಉಲ್ಲೇಖ (2)ರ ಸುತ್ತೂಲೆಯಲ್ಲಿ ನೀಡಲಾಗಿರುತ್ತದೆ.

ಘನ ಸರ್ವೋಚ್ಚ ನ್ಯಾಯಾಲಯವು ಉಲ್ಲೇಖ (3)ರಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಿ/ ಅನಧಿಕೃತವಾಗಿ ನಿರ್ಮಿಸುವ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಪಾಲಿಸಬೇಕಾದ ಅಗತ್ಯ ಪೂರ್ವಭಾವಿ ಕ್ರಮಗಳ ಬಗ್ಗೆ ದಿನಾಂಕ: 13.11.2024 ರಲ್ಲಿ ಆದೇಶ ನೀಡಿರುತ್ತದೆ.



ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಘನ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (3)ರ ಆದೇಶದ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಕ್ಷೆ ಉಲ್ಲಂಘನೆ/ ಅನಧಿಕೃತವಾಗಿ ನಿರ್ಮಿಸುವ ಕಟ್ಟಡಗಳನ್ನು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಪೂರ್ವಭಾವಿ ಕ್ರಮಗಳ ಬಗ್ಗೆ ಪಾಲಿಕೆಯಿಂದ ಉಲ್ಲೇಖ (4)ರ ಕಚೇರಿ ಆದೇಶದಲ್ಲಿ ಕೆಲವು ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಘನ ಸರ್ವೋಚ್ಚ ನ್ಯಾಯಾಲಯವು ಉಲ್ಲೇಖ (5)ರಲ್ಲಿ ನಕ್ಷೆ ಉಲ್ಲಂಘನೆ ಮಾಡಿ/ಅನಧಿಕೃತವಾಗಿ ನಿರ್ಮಿಸುವ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಅನುಸರಿಸಬೇಕಾದ ಅಗತ್ಯ ಕ್ರಮಗಳ ಬಗ್ಗೆ ವಿವರಿಸಿ ದಿನಾಂಕ: 17.12.2024 ರಂದು ವಿವರವಾದ ಆದೇಶ ಹೊರಡಿಸಿರುತ್ತದೆ. ಈ ಹಿನ್ನಲೆಯಲ್ಲಿ ಉಲ್ಲೇಖ (1)ರಲ್ಲಿ ದಿನಾಂಕ: 18.10.2024 ಕಛೇರಿ ಆದೇಶ ಹಾಗೂ ಉಲ್ಲೇಖ (4)ರಲ್ಲಿ 06.12.2024ರ ಸುತ್ತೋಲೆಯಲ್ಲಿ ಹೊರಡಿಸಿರುವ ನಿರ್ದೇಶನಗಳು ಮುಂದುವರೆದಂತೆ ಅನಧಿಕೃತ ಕಟ್ಟಡಗಳ ನಿರ್ಮಾಣ & ನಕ್ಷೆಗಳನ್ನು ಉಲ್ಲಂಘನೆ ತಡೆಗೆ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಿ ಆದೇಶಿಸಿದೆ.

**ದಿನಾಂಕ: 18-10-2024 ರ ಮಾರ್ಗಸೂಚಿಗಳಿಗೆ ಸೇರ್ಪಡೆಗೊಳಿಸಲಾದ ಅಂಶಗಳು**

| ಕ್ರಸಂ | ಮಾರ್ಗಸೂಚಿ |
|---|---|
| 1 | ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಅಗತ್ಯ ಮಂಜೂರಾತಿ/ಪರವಾನಗಿ ಪಡೆದು ಅದರಂತೆ ಕಟ್ಟಡ ನಿರ್ಮಾಣ ಕೈಗೊಂಡು ಪೂರ್ಣತಾ ಪ್ರಮಾಣ ಪತ್ರ /ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರವಷ್ಟೆ ಹಂಚಿಕೆದಾರರಿಗೆ/ ಖರೀದಿದಾರರಿಗೆ ಕಟ್ಟಡ/ಘಟಕಗಳನ್ನು ವರ್ಗಾಯಿಸುವುದಾಗಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ. ಇದರಂತೆ ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಪ್ರಮಾಣ ಪತ್ರ ಪಡೆದು ನಕ್ಷೆ ಮಂಜೂರಾತಿ ನೀಡುವುದು. |
| 2 | ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಮಂಜೂರಾದ ನಕ್ಷೆ/ಪರವಾನಿಗೆಯಂತೆ ಕಟ್ಟಡ ನಿರ್ಮಾಣವಾಗುತ್ತಿರುವ ಬಗ್ಗೆ ಆಯಾ ವಲಯಗಳ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ನಗರ ಯೋಜಕರು, ಹಾಗೂ ಸಹಾಯಕ ನಿರ್ದೇಶಕರು ಪ್ರತಿ ಎರಡು ತಿಂಗಳಿಗೊಮ್ಮೆ ಸ್ಥಳ ಪರಿಶೀಲನಾ ಕೈಗೊಂಡು ವರದಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು. ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣಗೊಂಡಿದ್ದಲ್ಲಿ ಅಂತಹ ಉಲ್ಲಂಘನೆಗಳ ವಿರುದ್ಧ ಆಯಾ ಉಪವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ವರದಿ/ಮಾಹಿತಿ ಕಳುಹಿಸತಕ್ಕದ್ದು.<br><br>ಇದೇ ರೀತಿ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳ ಪರಿಶೀಲನೆಯನ್ನು ಆಯಾ ವಾರ್ಡ್‌ನ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಕ್ರಮ ಜರುಗಿಸುವುದು. ಆ ನಂತರ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಯ್ದೆಯ ಕಲಂ 248 ರಂತೆ ಉಲ್ಲಂಘನೆಗಳ ವಿರುದ್ಧ ನಿಯಮಾನುಸಾರ ಮತ್ತು ಉಲ್ಲೇಖ (1), (2) & (4) ರ ಆದೇಶಗಳಂತೆ ಕ್ರಮ ಜರುಗಿಸುವುದು. |
| 3 | ಘನ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (5)ರ ಆದೇಶದ ಹಿನ್ನಲೆಯಲ್ಲಿ ಪಾಲಿಕೆಯಿಂದ ಮಂಜೂರಾದ ನಕ್ಷೆಯಂತೆ ಅಥವಾ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಬಗ್ಗೆ |



ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾಲಕಾಲಕ್ಕೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಈ ಕೆಳಕಂಡಂತೆ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದೆ.

| ತಪಾಸಣೆ ಮಾಡುವ ಅಧಿಕಾರಿ | | ತಪಾಸಣೆ ಅಂಗೀಕರಿಸಬೇಕಾದ ಅಧಿಕಾರಿ | |
|---|---|---|---|
| ನಕ್ಷೆ ಮಂಜೂರಾತಿ ಪಡೆದು ನಿರ್ಮಿಸುವಂತಹ ಕಟ್ಟಡಗಳು | ಅನಧಿಕೃತವಾಗಿ ನಿರ್ಮಿಸುವಂತಹ ಕಟ್ಟಡಗಳು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ನಿರ್ಮಾಣ ಮಾಡುವ ಕಟ್ಟಡಗಳು | ನಕ್ಷೆ ಮಂಜೂರಾತಿ ಪಡೆದು ನಿರ್ಮಿಸುವಂತಹ ಕಟ್ಟಡಗಳು | ಅನಧಿಕೃತವಾಗಿ ನಿರ್ಮಿಸುವಂತಹ ಕಟ್ಟಡಗಳು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ನಿರ್ಮಾಣ ಮಾಡುವ ಕಟ್ಟಡಗಳು |
| ನಗರ ಯೋಜಕರು/ ಸಹಾಯಕ ಅಭಿಯಂತರರು ಮತ್ತು ಸಹಾಯಕ ನಿರ್ದೇಶಕರು (ನಗರ ಯೋಜನೆ) | ಸಂಬಂಧಪಟ್ಟ ವಾರ್ಡ್ ಕಾರ್ಯವ್ಯಾಪ್ತಿಯ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು | ಜಂಟಿ ನಿರ್ದೇಶಕರು (ನಗರ ಯೋಜನೆ) | ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಅಭಿಯಂತರರು |

ಷರಾ:

1. ಕಟ್ಟಡ ತಪಾಸಣೆಯನ್ನು ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟಂಬರ್, ನವಂಬರ್ ಮಾಸಿಕದ ಪ್ರಥಮಾರ್ದದಲ್ಲಿ ಕೈಗೊಳ್ಳುವುದು.
2. ಕೇಂದ್ರ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯ ವ್ಯಾಪ್ತಿಯ ಉಪ ನಿರ್ದೇಶಕರು–ನಗರ ಯೋಜನೆ ರವರು ತಪಾಸಣೆಯನ್ನು ಕಾಲಕಾಲಕ್ಕೆ ಕೈಗೊಂಡು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುವುದು.

4 ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ಹೆಚ್ಚುವರಿ ನಿರ್ಮಾಣ/ಉಲ್ಲಂಘನೆಗಳು ಕಂಡು ಬಂದಲ್ಲಿ ಆಯಾ ವಾರ್ಡ್‌ನ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಉಲ್ಲಂಘನೆಗಳ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ವರದಿ ಸಲ್ಲಿಸತಕ್ಕದ್ದು. ಆ ನಂತರ ಅಂತಹ ಅನಧಿಕೃತ ನಿರ್ಮಾಣದ ವಿರುದ್ಧ ಕಾನೂನು ಅವಕಾಶಗಳಂತೆ ಮತ್ತು ಉಲ್ಲೇಖ (1), (2) & (4)ರ ಪಾಲಿಕೆಯ ಮಾರ್ಗಸೂಚಿಗಳಂತೆ ಸೂಕ್ತ ಕ್ರಮ ಜರುಗಿಸುವುದು.

5 ಘನ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (5)ರ ಆದೇಶದ ನಿರ್ದೇಶನಗಳ ಸಂಖ್ಯೆ 21(iv) & (viii) ರಲ್ಲಿ ಉದ್ದೇಶಿತ/ನಿರ್ಮಾಣವಾಗುವ ಕಟ್ಟಡಗಳಿಗೆ ಸೇವಾ ಸಂಪರ್ಕಗಳನ್ನು ಒದಗಿಸುವ ಸಂಬಂಧ ನಿರ್ದೇಶನಗಳನ್ನು ನೀಡಿದ್ದು ಅದರಂತೆ ಬೆಸ್ಕಾಂ ಮತ್ತು ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪಾಲಿಕೆಯಿಂದ ಪತ್ರ ಬರೆಯಲಾಗಿದೆ.

ಆದರಿಂದ ಪಾಲಿಕೆಯಿಂದ ಯಾವುದೇ ಕಟ್ಟಡಕ್ಕೆ ಬಿಬಿಎಂಪಿ ಕಾಯ್ದೆ 2020ರ ಕಲಂ 248(3) ರಡಿಯಲ್ಲಿ ಆದೇಶ ಹೊರಡಿಸಿದ ತಕ್ಷಣ ಸದರಿ ಕಟ್ಟಡಕ್ಕೆ/ನಿವೇಶನಕ್ಕೆ ಒದಗಿಸಿದ ತಾತ್ಕಾಲಿಕ/ಶಾಶ್ವತ ಸೇವಾ ಸಂಪರ್ಕವನ್ನು ಕಡಿತ/ಸ್ಥಗಿತಗೊಳಿಸುವಂತೆ ವಲಯ ಆಯುಕ್ತರು ಬೆಸ್ಕಾಂ ಮತ್ತು ಬಿ.ಡಬ್ಲ್ಯು.ಎಸ್.ಎಸ್.ಬಿಗೆ ಕೋರುವುದು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| 6 | ದಿನಾಂಕ: 02.01.2025 ರಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಕೆಲವು ವಲಯ ಆಯುಕ್ತರು ಕಾಯ್ದೆಯ ಕಲಂ 248(1) ಮತ್ತು 248(3) ರಡಿಯಲ್ಲಿ ಈಗಾಗಲೇ ಆದೇಶ ನೀಡಿರುವ ಪ್ರಕರಣಗಳಿಗೂ ಮತ್ತೊಮ್ಮೆ ನಿರ್ಮಾಣದಾರರು/ಮಾಲೀಕರು ಖುದ್ದು ಹಾಜರಾತಿಗೆ ಅವಕಾಶ ನೀಡಬೇಕೆ ಎಂಬ ಬಗ್ಗೆ ಮಾರ್ಗದರ್ಶನ ಕೋರಿರುತ್ತಾರೆ. ಈ ಸಂಬಂಧ ಕೆಳಕಂಡಂತೆ ಮಾರ್ಗದರ್ಶನ ನೀಡಿದೆ.<br>a) ಈಗಾಗಲೇ ಕಾಯ್ದೆಯ ಕಲಂ 248(1) & (2) ರಡಿಯಲ್ಲಿ ಕ್ರಮ ಜರುಗಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟವರು ಖುದ್ದು ಹಾಜರಾತಿಗೆ ದಿನಾಂಕ ನಿಗದಿಪಡಿಸಿ, ಅವಕಾಶ ನೀಡಿ ವಿವರಣೆ ಪಡೆದು ತದ ನಂತರ ಕಾಯ್ದೆಯ ಕಲಂ 248(3) ಮತ್ತು 356(1) ರ ಆದೇಶ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳುವುದು.<br>b) ಈಗಾಗಲೇ ಕಾಯ್ದೆಯ ಕಲಂ 248(3) ಮತ್ತು 356(1) ರಡಿಯಲ್ಲಿ ಆದೇಶ ನೀಡಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಖುದ್ದು ಹಾಜರಾತಿಗೆ ದಿನಾಂಕ ನಿಗದಿಪಡಿಸಿ ಸಮಜಾಯಿಷಿಗೆ ಅವಕಾಶ ನೀಡಿ ವಿವರಣೆ ಪಡೆದು ತದ ನಂತರ ಕಾಯ್ದೆಯ ಕಲಂ 356 (2) ರಡಿಯಲ್ಲಿ ಆದೇಶ ಹೊರಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವುದು.<br>c) ಈಗಾಗಲೇ ಕಾಯ್ದೆಯ ಕಲಂ 356 (2) ರಡಿಯಲ್ಲಿ ಆದೇಶ ನೀಡಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.<br>d) ಈಗಾಗಲೇ ಅಪೀಲು ಪ್ರಾಧಿಕಾರದಲ್ಲಿ 248(3) ರ ಆದೇಶದ ವಿರುದ್ಧ ಅಪೀಲು ಸಲ್ಲಿಸಿ, ಸದರಿ ಅಪೀಲು ಪ್ರಾಧಿಕಾರದಲ್ಲಿ ವಿಲೇವಾರಿಯಾಗಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮತ್ತೊಮ್ಮೆ ಖುದ್ದು ಹಾಜರಾತಿಗೆ ಅವಕಾಶ ಕಲ್ಪಿಸುವುದು ಅವಶ್ಯಕವಿರುವುದಿಲ್ಲ. ಆದ್ದರಿಂದ ಅಂತಹ ಪ್ರಕರಣಗಳಲ್ಲಿ ಮುಂದಿನ ಅಗತ್ಯ ಕ್ರಮ ಜರುಗಿಸುವುದು. |

ಮೇಲ್ಕಂಡ ಮಾರ್ಗಸೂಚಿಗಳಂತೆ ಕರ್ತವ್ಯ ನಿರ್ವಹಿಸದೇ ಅನಧಿಕೃತ ಕಟ್ಟಡ/ಕಟ್ಟಡದ ಉಲ್ಲಂಘನೆಗಳನ್ನು ತಡೆಯಲು ವಿಫಲರಾಗುವ ಮತ್ತು ಅನಧಿಕೃತ & ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸಲು ವಿಫಲರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಬಿಬಿಎಂಪಿ ಕಾಯ್ದೆ–2020 ರ ಕಲಂ 252 ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಆದೇಶಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಡಕಗಳು: ಉಲ್ಲೇಖದ ಪತ್ರಗಳು

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
3) ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಜಂಟಿ ನಿರ್ದೇಶಕರು–ನಗರ ಯೋಜನೆ (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ/ಮಹದೇವಪುರ ವಲಯ/ ಯಲಹಂಕ ವಲಯ/ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಕಾನೂನು ಕೋಶದ ಮುಖ್ಯಸ್ಥರು ರವರ ಮಾಹಿತಿಗಾಗಿ
5) ಪ್ರಧಾನ ಅಭಿಯಂತರರು, ಬಿಬಿಎಂಪಿ ರವರ ಮಾಹಿತಿಗಾಗಿ.
6) ಮುಖ್ಯ ನಗರ ಯೋಜಕರು, ಬಿಬಿಎಂಪಿ ರವರ ಮಾಹಿತಿಗಾಗಿ.
7) ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.